ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು):–

ಅ) 19 ಪಶುಸಂಗೋಪನಾ ಕೇಂದ್ರಗಳಿರುತ್ತದೆ. ಅದರಲ್ಲಿರುವ ಸಿಬ್ಬಂದಿಗಳ ವರ್ಗವಾರು ವಿವರ ಕೆಳಕಂಡಂತಿರುತ್ತದೆ :–

ಕ್ರ.ಸಂ.	ಹುದ್ದೆ	ಮಂಜೂರು	ಭರ್ತಿ	ಖಾಲಿ
1.	ಸಹಾಯಕ ನಿರ್ದೇಶಕರು	01	01	–
2.	ಪಶುವೈದ್ಯಾಧಿಕಾರಿ	10	09	01
3.	ಪಶುವೈದ್ಯಕೀಯ ಮೇಲ್ವಿಚಾರಕರು	01	01	–
4.	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	10	06	04
5.	ಪಶುವೈದ್ಯಕೀಯ ಪರೀಕ್ಷಕರು	10	05	05
6.	ಪಶುವೈದ್ಯಕೀಯ ಸಹಾಯಕರು	08	03	05
7.	ದ್ವಿತೀಯ ದರ್ಜೆ ನೌಕರರು	01	01	–
8.	ವಾಹನ ಚಾಲಕರು	01	01	–
9.	ಗ್ರೂಪ್ 'ಡಿ'	31	24	07
	ಒಟ್ಟು	73	51	22

ಆ) 2008–09ನೇ ಸಾಲಿನಲ್ಲಿ ದೇವಿಕೆರೆ ಗ್ರಾಮಪಂಚಾಯಿತಿ ವ್ಯಾಪ್ತಿಯ ದೇವಿಕೆರೆ ಗ್ರಾಮಕ್ಕೆ ಪಶು ಚಿಕಿತ್ಸಾಲಯ ಮಂಜೂರಾಗಿರುತ್ತದೆ ಮತ್ತು 2009–10ನೇ ಸಾಲಿನಲ್ಲಿ ಜಗಳೂರು ಮತಕ್ಷೇತ್ರಕ್ಕೆ ಯಾವುದೇ ಪಶುಸಂಗೋಪನಾ ಕೇಂದ್ರ ಮಂಜೂರಾಗಿರುವುದಿಲ್ಲ.

ಇ) ಇಲ್ಲ.

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿಯೋಜನೆ

471 (680) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 2008–09 ಮತ್ತು 2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ, ಈ ಪೈಕಿ ಇದುವರೆವಿಗೆ ಎಷ್ಟು ವೆಚ್ಚವಾಗಿದೆ;

ಆ) ರಾಜ್ಯ ಸರ್ಕಾರದಿಂದ ಈ ಯೋಜನೆಗಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ, ಈ ಪೈಕಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ;

ಇ) 2010–11ನೇ ಸಾಲಿನಲ್ಲಿ ಈ ಯೋಜನೆಗಾಗಿ ಸಿದ್ದಪಡಿಸಿರುವ ಪ್ರಸ್ತಾವನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ;

ಈ) ಈ ಯೋಜನೆಯಲ್ಲಿ ಅವ್ಯವಹಾರ ನಡೆದಿರುವುದು ನಿಜವೇ ; ಹಾಗಿದ್ದಲ್ಲಿ, ಈ ಸಂಬಂಧ ಎಷ್ಟು ಜನರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ;

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ಮತ್ತು ಆ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಈ ಕೆಳಕಂಡ ಸಾಲುಗಳಲ್ಲಿ ಬಿಡುಗಡೆ ಮಾಡಿದ ಅನುದಾನ ಮತ್ತು ವೆಚ್ಚ ಮಾಡಿದ ವಿವರಗಳು ಈ ಮುಂದಿನಂತಿದೆ.

(ಲಕ್ಷ ರೂ.ಗಳಲ್ಲಿ)

ವರ್ಷ	ಬಿಡುಗಡೆ ಮಾಡಿದ ಅನುದಾನ		ವೆಚ್ಚ
	ಕೇಂದ್ರ	ರಾಜ್ಯ	
2008–09	37939.23	4344.315	35787.47
2009–10	240148.15	24874.26	256920.37

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸ್ವೀಕೃತವಾದ ಅನುದಾನವನ್ನು ರಾಜ್ಯ ಮಟ್ಟದಲ್ಲಿ ಸ್ಥಾಪಿಸಲಾದ ನಿಧಿಗೆ ಜಮೆಮಾಡಿಕೊಂಡು ಅನುದಾನವನ್ನು ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬಿಡುಗಡೆ ಮಾಡಲಾಗುತ್ತಿದೆ. ವೆಚ್ಚವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಪ್ರತ್ಯೇಕವಾಗಿ ನಿರ್ವಹಿಸಿರುವುದಿಲ್ಲ.

ಇ) 2010–11ನೇ ಸಾಲಿಗೆ ಅನುಮೋದಿತ ಕಾರ್ಮಿಕ ಆಯವ್ಯಯಕ್ಕೆ ಅನುಗುಣವಾಗಿ ಕೇಂದ್ರದಿಂದ ರೂ. 77305.00 ಲಕ್ಷಗಳನ್ನು ಮತ್ತು ರಾಜ್ಯದಿಂದ ರೂ. 4784.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಈ) ಹೌದು, ಒಟ್ಟು 328 ಅಧಿಕಾರಿ/ಅಧಿಕಾರೇತರ/ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಸುವರ್ಣ ಗ್ರಾಮಯೋಜನೆ

474 (732) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–